# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 30-12-2022

## ಬೀದರ ಗ್ರಾಮೀಣ ಪೊಲೀಸ ಠಾಣೆ ಅಪರಾಧ ಸಂಖ್ಯೆ 101/2022 ಕಲಂ 78(3) ಕೆಪಿ ಕಾಯ್ದೆ :-

ದಿನಾಂಕ 29/12/2022 ರಂದು 1830 ಗಂಟೆಗೆ ನಾಗೇಂದ್ರ .ಪಿ.ಎಸ್.ಐ ರವರು ಠಾಣೆಯಲ್ಲಿದ್ದಾಗ ಸೋಲಪೂರ ಗ್ರಾಮದ ಬೊಮಗೊಂಡೇಶ್ವರ ಚೌಕ ಹತ್ತಿರ ಒಬ್ಬ ವ್ಯಕ್ತಿ ಸಾರ್ವಜನಿಕರಿಂದ ಹಣ ಪಡೆದು ಮಟ್ಕಾ ಚೀಟಿ ಬರೆದುಕೊಳ್ಳುತಿದ್ದಾನೆ ಅಂತಾ ಖಚಿತ ಬಾತ್ಮಿ ಬಂದ ಮೇರೆಗೆ ಸಿಬ್ಬಂದಿಯೊAದಿಗೆ ಹೋಗಿ ನೋಡಲಾಗಿ ಒಬ್ಬ ವ್ಯಕ್ತಿ ಸಾರ್ವಜನಿಕ ಸ್ಥಳದಲ್ಲಿ ನಿಂತು ಸಾರ್ವಜನಿಕರಿಗೆ ಮಟ್ಕಾ ನಸೀಬಿನ ಜೂಜಾಟ 01 ರೂ. ಗೆ 80 ಅಂತಲೂ ಮತ್ತು 10 ರೂ.ಗೆ 800 ರೂ. ಅಂತಾ ಹೇಳುತ್ತಾ ಸಾರ್ವಜನಿಕರಿಂದ ದುಡ್ಡು ಪಡೆದುಕೊಳ್ಳುತ್ತಾ ಅವರಿಗೆ ಮಟ್ಕಾ ಚೀಟಿ ಬರೆದುಕೊಡುತ್ತಿದ್ದ ಬಗ್ಗೆ ಖಚಿತಪಡಿಸಿಕೊಂಡು ಅವನ ಮೇಲೆ ದಾಳಿ ಮಾಡಿ ಅವನಿಗೆ ಹಿಡಿದು ಹೆಸರು ವಿಳಾಸ ವಿಚಾರಿಸಲಾಗಿ ಅವನು ತನ್ನ ಹೆಸರು ರಾಜಕುಮಾರ ತಂದೆ ಮಾಣಿಕಪ್ಪಾ ಹೈಬತ್ತೆ ವಯ- 33 ಜಾ|| ಗೊಂಡ ಉ|| ಕೂಲಿಕೆಲಸ ಸಾ|| ಸೋಲಪೂರ ತಾ|| ಜಿ|| ಬೀದರ ಅಂತ ತಿಳಿಸಿರುತ್ತಾನೆ. ನಂತರ ಆತನ ಅಂಗ ಝಡ್ತಿ ಮಾಡಲಾಗಿ ಅವನ ಹತ್ತಿರ 500/- ರೂಪಾಯಿಯ 2 ನೋಟು ಮತ್ತು 100/- ರೂಪಾಯಿಯ 2 ನೋಟು ಒಟ್ಟು ರೂ 1200/-ನಗದು ಹಣ ಮತ್ತು 1 ಮಟ್ಕಾ ಚೀಟಿ ಹಾಗೂ ಒಂದು ಬಾಲ್ ಪೆನ್ ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

## ಗಾಂಧಿಗAಜ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 197/2022 ಕಲಂ 379 ಐಪಿಸಿ :-

ದಿನಾಂಕ 29-12-2022 ರಂದು 1200 ರಂದು ಫಿರ್ಯಾದಿ ಶೀವರಾಜ ತಂದೆ ನಾಗಶೇಟ್ಟಿ ಹಲಬುರ್ಗೆ ವಯ-70 ವರ್ಷ ಜಾ: ಲಿಂಗಾಯತ ಉ: ವ್ಯಾಪಾರ ಸಾ: ಸಿ.ಎಮ.ಸಿ. ಕಾಲೋನಿ ಮೈಲೂರ ಬೀದರ ರವರು ಠಾಣೆಗೆ ಹಾಜರಾಗಿ ದೂರು ನೀಡಿದರ ಸಾರಾಂಶವೆನೆAದರೆ ಇವರ ಹತ್ತಿರವಿರುವ ಹಿರೊ ಹೊಂಡಾ ಸ್ಪ÷ ್ಲೆಂಡರ ಎನ.ಎಕ್ಸ.ಜಿ. ಮೋಟಾರ ಸೈಕಲ ವಾಹನ ಇದ್ದು ಅದರ ಸಂ. ಕೆಎ-38-ಕೆ-8456 ಇಂಜಿನ್ ನಂ. ಎಚ್.ಎ.12ಇಎಫ್ಎ9ಜಿ05128, ಚೆಸ್ಸಿನ್ ನಂ. ಎಮ್.ಬಿ.ಎಲ್.ಎಚ್.ಎ12ಇಎಲ್ಎ9ಜಿ00306 ಅದರ ಮಾದರಿ 2010 ಇರುತ್ತದೆ, ಕೆಂಪು/ಕಪ್ಪು ಬಣ್ಣದು ಇದ್ದು ಸದರಿ ವಾಹನದ ಅಂ, ಕಿಮತ್ತು, 9900=00 ರೂಪಾಯಿ ಮೋಟಾರ ಸೈಕಲನ್ನು ದಿನಾಂಕ 17/12/2022 ರಾತ್ರಿ 0200 ಗಂಟೆಯಿAದಾ 0330 ಗಂಟೆಯ ಮಧ್ಯ ಅವಧಿಯಲ್ಲಿ ಮನೆಯ ಮುಂದೆ ನಿಲ್ಲಿಸಿದ ಮೋಟಾರ ಸೈಕಲ ಯಾರೋ ಕಳ್ಳರು ಕಳವು ಮಾಡಿಕೊಂಡು ಹೊಗಿರುತ್ತಾರೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

## ಗಾಂಧಿಗAಜ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 198/2022 ಕಲಂ 457, 380 ಐಪಿಸಿ :-

ದಿನಾಂಕ 29-12-2022 ರಂದು 1900 ರಂದು ಫಿರ್ಯಾದಿ ಜಾನ ತಂದೆ ಸಿದ್ರಾಮ ಚಿಟಗುಪ್ಪಾಕರ ವಯ-58 ವರ್ಷ ಜಾ: ಕ್ರೀಶ್ಚನ ಉ: ಶಿಕ್ಷಕ ಸಾ: ಕುಂಬಾರವಾಡಾ ಭವಾನಿ ಧಾಬಾ ಹತ್ತಿರ ಬೀದರ ರವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೆನೆAದರೆ ದಿನಾಂಕ 22/12/2022 ರಂದು ಸಾಯಂಕಾಲ 5.00 ಗಂಟೆಗೆ ಮನೆಗೆ ಕೀಲಿ ಹಾಕಿ ಕ್ರೀಸಮಸ ಹಬ್ಬಕ್ಕಾಗಿ ಚಿಟಗುಪ್ಪಾ ಗ್ರಾಮಕ್ಕೆ ಹೊಗಿದ್ದು ಇರುತ್ತದೆ. ದಿನಾಂಕ 26/12/2022 ರಂದು ಮುಂಜಾನೆ 0600 ಗಂಟೆಗೆ ನಮ್ಮ ಮನೆಯ ಪಕ್ಕದವರಾದ ಮಂಜುನಾಥ ರವರು ನನಗೆ ಫೋನ ಮಾಡಿ ತಿಳೀಸಿದ್ದೆನೆಂದರೆ ದಿನಾಂಕ 26/12/2022 ರಂದು ರಾತ್ರಿ 0200 ಗಂಟೆಯಿAದಾ 0500 ಗಂಟೆಯ ಅವಧಿಯಲ್ಲಿ ಮನೆಗೆ ಹಾಕೀದ ಕೀಲಿ ಕೊಂಡಿ ಮುರಿದು ಮನೆಯಲ್ಲಿದ್ದ 1] ಬಂಗಾರದ ಉಂಗುರಗಳು 05 ಗ್ರಾಮ ಉಳ್ಳ 04 ಉಂಗುರುಗಳು ಒಟ್ಟು 20 ಗ್ರಾಮ ಅಂ.ಕಿ. 80000=00 ರೂ 2] ಬಂಗಾರದ ಕೀವಿಯ ಒಳೆಗಳು ಒಟ್ಟು ಎರಡು ಜೋತೆ ಅಂ.10 ಗ್ರಾಮ ಅಂ.ಕಿ. 40000=00 ರೂ 3] ಒಂದು ಟಿ.ವಿ. ಸ್ಯಾಮಸಂಗ 32 ಇಂಚು ಅಂ.ಕಿ. 15000=00 ರೂ 4] ಬೆಳ್ಳಿಯ ಎರಡು ಸುತ್ತು ಉಂಗುರಗಳು 20 ಗ್ರಾಮ ಅಂ.ಕಿ. 1000=00 ರೂ 5] ನನ್ನ ಮಗನಾದ ಇಮಾನವೇಲ ರಾಯ ಇತನ ಒಂದು ಡಿಗ್ರಿ ಪ್ರಮಾಣ ಪತ್ರ ಸಂ. 1ಎ.ಪಿ.15ಐ.ಎಸ್.035 ಹೀಗೆ ಎಲ್ಲಾ ಸೇರಿ ಒಟ್ಟು 136000=00 ರೂ ಮೌಲ್ಯದ ವಸ್ತುಗಳು ಕಳವು ಮಾಡಿಕೊಂಡು ಹೋಗಿರುತ್ತಾರೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.